ಸಿ.ಸಿ..ನಂ.130-24

ಪಿ.ಡಬ್ಲ್ಯೂ-1

ದಿನಾಂಕ.23-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೆ ಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ.ಎಸ್ ಎನ್ ವಕೀಲರಿಂದಃ**

1. ನೀವು ಈ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯಕ್ಕೆ ನೀವು ಯಾವುದೇ ದಾಖಲಾತಿಯ ಮೂಲ ಪ್ರತಿಯನ್ನು ಹಾಜರು ಪಡಿಸಿಲ್ಲ ಎಂದರೆ ಹಾಜರು ಪಡಿಸಿಲ್ಲ . ಕರಾರು ಪತ್ರದ ಪ್ರಕಾರವಾಗಿ ಸಾಲ ಕೊಟ್ಟವನಿಗೆ ಸಾಲ ತೀರಿಸಿದ ನಂತರ ಆ ಕರಾರು ಪತ್ರದ ಮೂಲ ಪ್ರತಿಯನ್ನು ವಾಪಸ್ಸು ಕೊಡಲಾಗುತ್ತದೆ ಎಂದರೆ ಸರಿ. ಮೊದಲನೆ ಕರಾರು ಪತ್ರದ ಜೆರಾಕ್ಸ ಪ್ರತಿಯಲ್ಲಿ ಕೊನೆಯ ಪುಟದಲ್ಲಿ ಅರೋಪಿಯ ಕಡೆಯಿಂದ ಸಹಿ ಹಾಕಿದ ಖಾಲಿ ಚೆಕ್ ನ್ನು ಪಡೆದುಕೊಂಡಿರುತ್ತೇನೆ ಎಂದು ಬರೆದಿರುತ್ತೀರಿ ಎಂದರೆ ಅವರು ನನಗೆ ಸಹಿ ಹಾಕಿದ ಯಾವುದೇ ಖಾಲಿ ಚೆಕ್ ನ್ನು ನನಗೆ ಕೊಡಲಿಲ್ಲ ಅವರ ಬಳಿ ಚೆಕ್ ನ್ನು ಇಟ್ಟು ಕೊಂಡಿದ್ದರು . ಅರೋಪಿಗೆ ಮೋಸ ಮಾಡುವ ಉದ್ದೇಶದಿಂದ ಮೊದಲಿನ ಕರಾರು ಪತ್ರದ ಡುಪ್ಲಿಕೇಟ್ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ . ಆರೋಪಿ ಯಿಂದ ಬೇಕಾದಷ್ಟು ಚೆಕ್ ನ್ನು ಪಡೆದುಕೊಂಡು ನಿಮ್ಮಿಷ್ಟಕ್ಕೆ ಬಂದಂತಹ ಹಣವನ್ನು ಅದರಲ್ಲಿ ನಮೂದಿಸಿ ನಿಮಗೆ ಇಷ್ಟ ಬಂದಂತೆ ಚೆಕ್ ಬೌನ್ಸ ಪ್ರಕರಣವನ್ನು ಆರೋಪಿ ವಿರುದ್ಧ ಹಾಕಿರುತ್ತೀರಿ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ನಿಶಾನೆಗೊಳಪಡಿಸಲಾದ ದಾಖಲಾತಿಗಳು ನಿವೇ ಸೃಷ್ಟಿ ಮಾಡಿದ ದಾಖಲೆಗಳು ಅವುಗಳಿಗೂ ಆರೋಪಿಗೂ ಯಾವುದೆ ಸಂಬಂದ ಇಲ್ಲ ಎಂದರೆ ಸರಿಯಲ್ಲ . ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ .

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅಂಕೋಲಾ.